ಅ) ರಾಜ್ಯಾದ್ಯಾಂತ ಈ ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಹಿಂದಿ ಶಿಕ್ಷಕರ ಹುದ್ದೆಗಳು ಎಷ್ಟು, ಎಷ್ಟು ವರ್ಷಗಳಿಂದ ಖಾಲಿ ಇವೆ.

ಇ) ಶಿಕ್ಷಕರಿಲ್ಲದ ಶಾಲೆಗಳಲ್ಲಿ ಹಿಂದಿ ಪಠ್ಯ ವಿಷಯವಾಗಿದ್ದು ಈ ಶಾಲಾ ಮಕ್ಕಳಿಗೆ ತೊಂದರೆಯಾಗುವುದಿಲ್ಲವೆ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಳ್ಳಲು ಕ್ರಮಗಳೇನು ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಹಿಂದಿ ವಿಷಯಕ್ಕೆ ಗರಿಷ್ಠ ಅಂಕ 100 ಅಂಕಗಳನ್ನು ನಿಗಧಿಪಡಿಸಿದೆ.

ಆ) ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 223 ಹಾಗೂ ಪ್ರಾಥಮಿಕ ಶಾಲೆಗಳಲ್ಲಿ 158 ಹಿಂದಿ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳು ಕಳೆದ ವರ್ಷದಿಂದ ಖಾಲಿ ಇದೆ.

ಇ) ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಮುಂದಿನ ನೇಮಕಾತಿಗಳಲ್ಲಿ ಭರ್ತಿ ಮಾಡಲಾಗುವುದು. ಹಾಗೂ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅಂತಿಮ ಆಯ್ಕೆ ಪಟ್ಟಿ ಪ್ರಕಟಗೊಂಡಿದ್ದು, ನೇಮಕಾತಿ ಆದೇಶಗಳನ್ನು ಹೊರಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಸೌರಶಕ್ತಿ, ವಿದ್ಯುತ್ ಉತ್ಪಾದನಾ ಘಟಕ.

1772 - ಶ್ರೀ ಅಲ್ಲಮ ವೀರಭದ್ರಪ್ಪ (ಕುರುಗೋಡು) : ಮಾನ್ಯ ಪರಿಸರ ಜೀವಿಶಾಸ್ತ್ರ, ವಿಜ್ಞಾನ ಮತ್ತು ಸಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತರೆ ಜಿಲ್ಲೆಗಳಂತೆ ಬಳ್ಳಾರಿ ಜಿಲ್ಲೆಯು ಸೂರ್ಯ ಶಕ್ತಿಯ ವರ ಪ್ರಸಾರವಾಗುತ್ತದೆಂದು ಸರ್ಕಾರವು ಅರಿತಿದೆಯೇ ?

ಆ) ಹಾಗಾದರೆ, ಸರ್ಕಾರವು ಈ ಪ್ರದೇಶದಲ್ಲಿ ಮಾರ್ಗದರ್ಶಕ ಸೌರಶಕ್ತಿ ವಿದ್ಯುತ್ ಉತ್ಪಾದನಾ ಮತ್ತು ಸಂಗ್ರಹಣಾ ಘಟಕವನ್ನು ಸ್ಥಾಪಿಸಬಹುದೇ ?

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಪರಿಸರ ಜೀವಿಶಾಸ್ತ್ರ, ವಿಜ್ಞಾನ ಮತ್ತು ಸಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಸೌರ ಶಕ್ತಿಯು ಅತ್ಯಂತ ದುಭಾರಿಯಾದದ್ದು ಹಾಗಾದರು ಸಹ ಈಗಾಗಲೇ ಕೇಂದ್ರ ಸರ್ಕಾರದ ಬದಲಿ ಇಂಧನ ಮೂಲಗಳ ಸಚಿವಾಲಯದ ಪ್ರಾತ್ಯೇಕೀಕ ಕಾರ್ಯಕ್ರಮದ ಯೋಜನೆಯ 100 ಕಿ.ಮೀ ವ್ಯಾಟ್ ಸಾಮರ್ಥ್ಯದ ಸೌರಶಕ್ತಿ ವಿದ್ಯುತ್ ಉತ್ಪಾದನಾ ಘಟಕವನ್ನು ರಾಯಚೂರು

ಪಟ್ಟಣದ ಹತ್ತಿರವಿರುವ ಶಕ್ತಿ ನಗರ ಎಂಬ ಸ್ಥಳದಲ್ಲಿ ಸ್ಥಾಪಿಸಲು ಕರ್ನಾಟಕ ವಿದ್ಯುತ್ ನಿಗಮವು ಕೈಗೆತ್ತಿಕೊಂಡಿರುತ್ತದೆ. ಈ ಘಟಕಕ್ಕೆ ಒಟ್ಟು 3 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಇದರಲ್ಲಿ 2 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರದ ಬದಲಿ ಇಂಧನ ಮೂಲಗಳ ಸಚಿವಾಲಯ ಅನುದಾನವಾಗಿ ನೀಡುತ್ತಿದೆ. ಹಾಗೂ ಉಳಿದ 1 ಕೋಟಿ ರೂಪಾಯಿಯನ್ನು ಕರ್ನಾಟಕ ವಿದ್ಯುತ್ ನಿಗಮವು ಭರಿಸುತ್ತದೆ ಈ ತೆರನಾಗಿ 30 ಕೋಟಿ ರೂಪಾಯಿ, ಪ್ರತಿ ಮೆಗಾವ್ಯಾಟ್ ಸೌರಶಕ್ತಿ ವಿದ್ಯುತ್ ಉತ್ಪಾದಿಸಲು ಬೇಕಾಗುತ್ತದೆ. ಇಂತಹ ಇನ್ನೊಂದು ಘಟಕವನ್ನು ಬಳ್ಳಾರಿ ಜಿಲ್ಲೆಯಲ್ಲಿ ಸ್ಥಾಪಿಸಲು ಇದು ದುಬಾರಿ ವೆಚ್ಚದ ಸೂಚಕವಾಗಿದೆ. ಕೇಂದ್ರ ಸರ್ಕಾರವು ಅನುದಾನ ನೀಡಲು ಒಪ್ಪಿಕೊಂಡಾಗ ಮಾತ್ರವೆ ರಾಜ್ಯ ಸರ್ಕಾರದಿಂದ ಬಳ್ಳಾರಿಯಲ್ಲಿ ಮಾರ್ಗದರ್ಶನ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ.

ವಿಶ್ವ ಬ್ಯಾಂಕಿನ ಸಹಾಯದ ಶಿಕ್ಷಣ ಅಭಿವೃದ್ಧಿ ಯೋಜನೆ.

1773- ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಶ್ವ ಬ್ಯಾಂಕಿನ ಸಹಾಯದ ಶಿಕ್ಷಣ ಅಭಿವೃದ್ಧಿ ಯೋಜನೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಆಯ್ಕೆಮಾಡಲಾಗಿದೆಯೇ?

ಆ) ಆಯ್ಕೆ ಆಗಿದ್ದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಯೋಜನೆಗೆ ನಿಗಧಿಯಾದ ಮೊಬಲಗು ಎಷ್ಟು?

ಇ) ಯಾವಾಗಲಿಂದ ಪ್ರಾರಂಭವಾಗುವುದು?

ಈ) ಈ ಯೋಜನೆಗಳಿಂದ ಸಿಗುವ ಸವಲತ್ತುಗಳು ಯಾವುವು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಯೋಜನಾ ಅವಧಿಗೆ (1997-98 ರಿಂದ 200-102ರವರೆಗೆ) ಒಟ್ಟು ಅಂದಾಜು ರೂ. 3402.289 ಲಕ್ಷ

ಇ) ಭಾರತ ಸರ್ಕಾರದಿಂದ ಅನುಮೋದನೆ ಸಿಕ್ಕಿದ ಕೂಡಲೇ (ಬಹುಶಃ ಅಕ್ಟೋಬರ್ 1997 ರಿಂದ)

ಈ) 1. 33 ಶಾಲಾ ಕಟ್ಟಡಗಳನ್ನು ನಿರ್ಮಿಸಿ, ಅವುಗಳಿಗೆ ಕುಡಿಯುವ ನೀರಿನ ಸೌಲಭ್ಯ ಶೌಚಾಲಯಗಳು ಮತ್ತು ವಿದ್ಯುಚ್ಛಕ್ತಿ ಒದಗಿಸುವುದು. 66 ಶಿಕ್ಷಕರನ್ನು ನೇಮಿಸುವುದು.

2. ಪ್ರಸ್ತುತ ಅವಶ್ಯಕವಿದ್ದ ಪ್ರಾಥಮಿಕ ಶಾಲೆಗಳಿಗೆ 109 ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವುದು.